**ಓ.ಎಸ್. ಸಂಖ್ಯೆಃ 54/2020**

**ಪಿ.ಡಬ್ಲ್ಯೂಃ 1**

ದಿನಾಂಕಃ 02.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಜಿ ಎಂ ಆರ್ ವಕೀಲರಿಂದ**

1. ದಾವಾ ಆಸ್ತಿ ಮೂಲತಃ ಸದಾಶಿವ ರೆಡ್ಡಿಯವರಿಗೆ ಸೇರಿದ್ದು. ದೇಶನೂರು ಗ್ರಾಮದ ಸರ್ವೆ ನಂ 857/1 ರಲ್ಲಿನ ಬಹಳಷ್ಟು ಜಮೀನು ತುಂಗಭದ್ರ ಬೋರ್ಡ ಗೆ ಸಂಬಂಧಪಟ್ಟದ್ದು ಇದೆ ಎಂದರೆ ಸರಿ. ಸದರಿ ಜಮೀನಿನ ವಿಸ್ತೀರ್ಣ ಸುಮಾರು 768.46 ಎಕರೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿಗಳು 1 ಎಕರೆ 50 ಸೆಂಟ್ಸ ವಿಸ್ತೀರ್ಣ ದಲ್ಲಿ ಸುಮಾರು 65-70 ವರ್ಷದಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿಯರು ಈಗ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸದರಿ 1 ಎಕರೆ 50 ಸೆಂಟ್ಸ ವಿಸ್ತೀರ್ಣ ಜಮೀನಿನ ಪಹಣಿ ಪತ್ರಿಕೆ 4 ನೇ ಪ್ರತಿವಾದಿ ವೆಂಕಮ್ಮ ರವರ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ.

2. ನನಗೆ ಬೆಳಗಲ್ಲು ನಿಂಗಪ್ಪ ಗೊತ್ತಿಲ್ಲ. ಸದರಿ ಬೆಳಗಲ್ಲು ನಿಂಗಪ್ಪರವರಿಗೆ ಸರ್ವೆ ನಂ 369/1 ರಲ್ಲಿ 1 ಎಕರೆ 20 ಸೆಂಟ್ಸ ಜಮೀನನ್ನು ಭೂ ಮಂಜೂರಾತಿ ಮೂಲಕ ಮಂಜೂರು ಆಗಿತ್ತು ಎಂದರೆ ಗೊತ್ತಿಲ್ಲ. ಸದರಿ ಬೆಳಗಲ್ಲು ನಿಂಗಪ್ಪರವರ ಪಶ್ಚಿಮ ದಿಕ್ಕಿಗೆ ಪ್ರತಿವಾದಿಯರ ಜಮೀನು ಇದೆ ಎಂದರೆ ಸರಿಯಲ್ಲ. ಬೆಳಗಲ್ಲು ನಿಂಗಪ್ಪ ರವರು ಪ್ರತಿವಾದಿ ನಂ 4 ರವರ ವಿರುದ್ಧ ಒ ಎಸ್ 16/1987 ಸಲ್ಲಿಸಿದರ ಬಗ್ಗೆ ಗೊತ್ತಿಲ್ಲ. ನಂತರ 4 ನೇ ಪ್ರತಿವಾದಿ ಸಹ ಒ ಎಸ್ ನಂ 21/1987 ಸಲ್ಲಿಸಿದರು ಎಂದರೆ ಗೊತ್ತಿಲ್ಲ. ಒ ಎಸ್ 16/1987 ದಾವೆ ಡಿಕ್ರಿ ಆಗಿದ್ದು ಒ ಎಸ್ ನಂ 21/1987 ವಜಾ ಆಗಿದ್ದು ಅದರ ವಿರುದ್ದ ಅದರ ವಿರುದ್ದ ಬೆಳಗಲ್ಲು ನಿಂಗಪ್ಪ ಆರ್ ಎ ನಂ 19/1992 ಹಾಗೂ 20/1992 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿ ಆದೇಶದಲ್ಲಿ ಪ್ರಕರಣವನ್ನು ಮರು ವಿಚಾರಣೆ ಮಾಡಲು ಅದೇಶ ಮಾಡಿದ್ದರು ಎಂದರೆ ಗೊತ್ತಿಲ್ಲ. ನಂತರ ದಾವೆ ಸಂಖ್ಯೆ 16/1987 ಡಿಕ್ರಿ ಆಗಿದ್ದು ದಾವೆ ಸಂಖ್ಯೆ 21/1987 ವಜಾ ಆಯಿತು ಎಂದರೆ ಗೊತ್ತಿಲ್ಲ. ಸದರಿ ತೀರ್ಪಿನ ವಿರುದ್ಧ

**ಪಿ.ಡಬ್ಲ್ಯೂಃ 1**

ಪ್ರತಿವಾದಿ ನಂ 4 ರವರು ಆರ್ ಎ 75/2005 ಹಾಗೂ 76/2005 ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಬಾಕಿ ಇರುವಾಗ ಬೆಳಗಲ್ಲು ನಿಂಗಪ್ಪ ರವರು ಸದಾಶಿವ ರೆಡ್ಡಿಗೆ ಮಾರಾಟ ಮಾಡಿದರು ಎಂದರೆ ಗೊತ್ತಿಲ್ಲ. ಆಗ ಸದಾಶಿವರೆಡ್ಡಿಯವರನ್ನು ಪ್ರಕರಣದಲ್ಲಿ ಸೇರಿಸಲಾಯಿತು ಎಂದರೆ ಗೊತ್ತಿಲ್ಲ. ಒ ಎಸ್ ನಂ 21/1987 ದಾವೆ ಡಿಕ್ರಿ ಆಯಿತು ಎಂದರೆ ಗೊತ್ತಿಲ್ಲ. ಪ್ರಕರಣಗಳು ಬಾಕಿ ಇದ್ದಾಗಲೇ ಮರಣ ಹೊಂದಿದರು ಎಂದರೆ ಗೊತ್ತಿಲ್ಲ. ನಂತರ ಸದಾಶಿವ ರೆಡ್ಡಿಯವರ ಮಕ್ಕಳು ಆರ್ ಎಸ್ ಎ 5720/2009 ಸಲ್ಲಿಸಿದ್ದು ಸದರಿ ಪ್ರಕರಣ ವಜಾ ಆಯಿತು ಎಂದರೆ ಗೊತ್ತಿಲ್ಲ.

3. ದಿಃ 01.03.1999 ರಂದು ಸದಾಶಿವ ರೆಡ್ಡಿಯವರಿಂದ ಆಸ್ತಿ ಖರೀದಿ ಮಾಡಿದೆ ಎಂದರೆ ಸರಿ. ಪ್ರಕರಣಗಳು ಬಾಕಿ ಇದ್ದ ವಿಚಾರ ಗೊತ್ತಿದ್ದರು ಸಹ ನನ್ನ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದಾಶಿವ ರೆಡ್ಡಿಯವರಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಬಂದಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಹೇಳಲು ಆಗುತ್ತದೆ. ಪ್ರತಿವಾದಿಯರು ದಾವಾ ಆಸ್ತಿಗೆ ಬಂದು ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು ಪ್ರತಿವಾದಿ ನಂ 4(ಎ) ಹನುಮೇಶ ರವರ ಕಬ್ಬಿನ ಗದ್ದೆಗೆ ಬೆಂಕಿ ಹಚ್ಚಿದ್ದು ನಂತರ ಅವರಿಗೆ ಪರಿಹಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ**